**6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.296/2018**

(ಪ್ರಾ.ಸಾ.15 / ಚಾ.ಸಾ.23)

ತಾಃ 22-09-2021 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

ಸಾಕ್ಷಿದಾರರ ಹೆಸರು : ಅನಿಲ್ ಕುಮಾರ್

ತಂದೆಯ ಹೆಸರು : ಕೊಂಡಪ್ಪ
ವಯಸ್ಸು : 33 ವರ್ಷ
ಉದ್ಯೋಗ : ವ್ಯವಸಾಯ
ವಾಸ ಸ್ಥಳ : ದೇವಶೆಟ್ಟಿಹಳ್ಳಿ

**ಮುಖ್ಯ ವಿಚಾರಣೆ : ಪ್ರಭಾರ ಸರ್ಕಾರಿ ಅಭಿಯೋಜಕರಿಂದಃ**

ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನಾನು ನೋಡಿಲ್ಲ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ದಾಖಲೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯು ದಿನಾಂಕ 22-11-2017 ರ ಅಮಾನತ್ತು ಪಂಚನಾಮೆಯಾಗಿದ್ದು ಸದರಿ ಅಮಾನತ್ತು ಪಂಚನಾಮೆಯನ್ನು ನಿಪಿ-20 ಎಂದು ಸಾಕ್ಷಿಯ ಸಹಿಯನ್ನು ನಿಪಿ-20(ಎ) ಎಂದು ಗುರುತಿಸಲಾಯಿತು.

2. ಸುಮಾರು ಎರಡು ವರ್ಷಗಳ ಹಿಂದೆ ನಾನು ಮನೆಗೆ ಯಾವುದೇ ವಸ್ತುವನ್ನು ತೆಗೆದುಕೊಂಡು ಮೋಟಾರ್ ಸೈಕಲ್‌ನಲ್ಲಿ ಹೋಗುವಾಗ ನನ್ನನ್ನು ತಡೆದು ನಿಲ್ಲಿಸಿ ಠಾಣೆಯ ಹತ್ತಿರ ಕರೆದುಕೊಂಡು ಹೋಗಿದ್ದು ಆಗ ಪೋಲಿಸರ ಕೋರಿಕೆಯ ಮೇರೆಗೆ ನಂದಗುಡಿ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಪೋಲಿಸರು ಸಹಿ ಹಾಕಲು ಹೇಳಿದ್ದರಿಂದ ಸಹಿ ಮಾಡಿರುತ್ತೇನೆ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ನಾನು ಸಹಿ ಮಾಡಿದ ಸಮಯದಲ್ಲಿ ಮತ್ತೆ ಯಾರು ಇದ್ದರು ಎಂದು ಗೊತ್ತಿಲ್ಲ. ಆ ಸಮಯದಲ್ಲಿ ಯಾವುದೇ ಆರೋಪಿತರು ಇರಲಿಲ್ಲ.

3. ಸಾಕ್ಷಿಗೆ ನ್ಯಾಯಾಲಯದ ಮುಂದೆ ಇದ್ದ ಬಿಳಿ ಬಟ್ಟೆಯ ಮೇಲೆ ಅಂಟಿಸಿರುವ ಚೀಟಿಯ ಮೇಲೆ ಸಹಿಯನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಸದರಿ ವಸ್ತುಗಳನ್ನು ನೋಡಿ ಗುರುತಿಸಿರುವುದಿಲ್ಲ. ಸದರಿ ವಸ್ತುಗಳನ್ನು ತನ್ನ ಸಮಕ್ಷಮ ಅನಮಾನತ್ತುಪಡಿಸಿಕೊಂಡಿಲ್ಲ ಎಂದು ಹೇಳುತ್ತಾರೆ. ನನ್ನ ಸಮಕ್ಷದಲ್ಲಿ ಯಾವುದೇ ಚಾಕು ಮತ್ತು ವಾಹನವನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರವರಿಂದಃ-**

ದಿನಾಂಕ 22-11-2017 ರಂದು ನಂದ ಗುಡಿ ಪೋಲಿಸರು ನನ್ನನ್ನು ಈ ಪ್ರಕರಣದಲ್ಲಿ ಪಂಚರಾಗಲು ಕರೆಸಿದ್ದರು ಎಂದರೆ ಸರಿಯಲ್ಲ. ನಾನು ಠಾಣೆಗೆ ಹೋದಾಗ ಈ ಪ್ರಕರಣದ 1ನೇ ಆರೋಪಿಯಾದ ನಾರಾಯಣ್ಣಪ್ಪ ಹಾಗೂ 2ನೇ ಆರೋಪಿ ಮಧುಕುಮಾರ್ ಪೋಲಿಸರ ವಶದಲ್ಲಿ ಇದ್ದು ಸದರಿಯವರನ್ನು ವಿಚಾರಣೆ ಮಾಡಿದಾಗ ತಾವು ಹಾಗೂ ಇತರ ಆರೋಪಿತರು ಸೇರಿ ಕೃತ್ಯ ಎಸಗಿದ್ದಾಗಿ ಹಾಗೂ 1ನೇ ಆರೋಪಿಯು ತಾನು ಚಾಕುವಿನಿಂದ ಲೋಕೇಶ್ ಎಂಬವರ ಭುಜಕ್ಕೆ ಹಾಗೂ 2ನೇ ಆರೋಪಿಯಾದ ಮಧುಕುಮಾರ್ ಕವಿತಾ ಮತ್ತು ರಮೇಶ್‌ಗೆ ಚಾಕುವಿನಿಂದ ತಿವಿದಿದ್ದು ಸದರಿ ಕೃತ್ಯಕ್ಕೆ ಬಳಸಿದ್ದ ವಸ್ತುಗಳನ್ನು ಹಾಗೂ ಬೈಕ್‌ಗಳನ್ನು ಹಾಜರುಪಡಿಸುವುದಾಗಿ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಪೋಲಿಸರು 1 ಮತ್ತು 2ನೇ ಆರೋಪಿಯ ಜೊತೆಯಲ್ಲಿ ಚಿಕ್ಕಕೊಂಡಳ್ಳಿ ಬಳಿಯ ಲೈನ್ ಮ್ಯಾನ್ ಜಮೀನಿನ ಹತ್ತಿರ ಬಂದಿದ್ದು 1ನೇ ಆರೋಪಿಯು ಜಮೀನಿನಲ್ಲಿ ಬೆಳೆದಿದ್ದ ಹುಲ್ಲಿನಿಂದ ಒಂದು ಚಾಕುವನ್ನು ತೋರಿಸಿ ಇದೇ ಚಾಕುವಿನಿಂದ ಲೋಕೇಶ್‌ಗೆ ಹೊಡೆದಿದ್ದಾಗಿ ತಿಳಿಸಿ ಹಾಜರುಪಡಿಸಿದ್ದಾಗಿ ಹಾಗೂ 2ನೇ ಆರೋಪಿಯು ಅಲ್ಲಿಂದ 10 ಮೀಟರ್ ದೂರದಿಂದ ಹುಲ್ಲಿನಿಂದ ಒಂದು ಚಾಕುವನ್ನು ಹಾಜರುಪಡಿಸಿ ಸದರಿ ಚಾಕುವಿನಿಂದ ಕವಿತಾ ಹಾಗೂ ರಮೇಶ್‌ಗೆ ಹಲ್ಲೆ ಮಾಡಿದ್ದಾಗಿ ಹೇಳಿ ಹಾಜರುಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಅಲ್ಲಿಂದ 500 ಮೀಟರ್ ಅಂತರದ ದೂರದಲ್ಲಿ ರಸ್ತೆಯ ಅಂಚಿನಲ್ಲಿ ನಿಲ್ಲಿಸಿದ್ದ ಮೋಟಾರ್ ಸೈಕಲ್‌ನ್ನು 1 ಮತ್ತು 2ನೇ ಆರೋಪಿತರು ಹಾಜರುಪಡಿಸಿ ಸದರಿ ಬೈಕ್‌ಗಳಲ್ಲಿ 1ನೇ ಆರೋಪಿ ಮತ್ತು 3ನೇ ಆರೋಪಿ ಬಂದಿದ್ದಾಗಿ ಹೇಳಿ ತೋರಿಸಿದ ಮೇರೆಗೆ ಹಾಗೂ 2ನೇ ಆರೋಪಿಯು ಇನ್ನೊಂದು ಬೈಕ್‌ನಲ್ಲಿ ಬಂದಿದ್ದಾಗಿ ಹೇಳಿದ್ದರಿಂದ ಮುಂದಿನ ಕ್ರಮಕ್ಕಾಗಿ ನನ್ನ ಹಾಗೂ ಚಾಸಾ-24 ರವರ ಸಮಕ್ಷಮ ನಿಪಿ-20 ರಂತೆ ಪಂಚನಾಮೆ ಮಾಡಿ ಓದಿ ಹೇಳಿದ ನಂತರ ನನ್ನ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ. ಅದೇ ರೀತಿ ಎರಡು ಚಾಕುಗಳನ್ನು ಮುಂದಿನ ಕ್ರಮಕ್ಕಾಗಿ ಅಮಾನತ್ತುಪಡಿಸಿಕೊಂಡು ಅವುಗಳನ್ನು ಬಿಳಿ ಬಟ್ಟೆಯಲ್ಲಿ ಪ್ಯಾಕ್

ಮಾಡಿ ಸೀಲ್ ಮಾಡಿ ಅದರ ಮೇಲೆ ನಮ್ಮ ಸಹಿ ಇರುವ ಬಿಳಿ ಚೀಟಿಯನ್ನು ಅಂಟಿಸಿರುತ್ತಾರೆ ಎಂದರೆ ಸರಿಯಲ್ಲ.

2. ಆ ಸಂದರ್ಭದಲ್ಲಿ ಈ ಪ್ರಕರಣದ 1 ಮತ್ತು 2ನೇ ಆರೋಪಿತರು ಹಾಜರಿದ್ದರು ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರುಗಳಿಂದ ಃ**

ಆರೋಪಿತರುಗಳ ವಕೀಲರುಗಳು ಯಾವುದೇ ಪಾಟೀ-ಸವಾಲು ಇಲ್ಲ ಎಂದು ಹೇಳುತ್ತಾರೆ.

**ಮರುವಿಚಾರಣೆಃ** ಇಲ್ಲ

{ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.}

ಓ. ಹೇ. ಸಾ. ಸ. ಸಹಿ ಮಾಡಿದ್ದಾರೆ.

(ಚೆನ್ನಪ್ಪ ಗೌಡ)
6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.